ಕುಣಿಕೆಗೆ ತಲೆಯೊಡ್ಡಿದಂತೆ. ಅದು ಒಬ್ಬ ಗಂಡಸನ್ನು ಮದುವೆಯಾದ ಈ ಇಬ್ಬರು ಮಹಿಳೆಯರಂತೆ ಹಾಸ್ಯಾಸ್ಪದ. ಆ ಇಬ್ಬರನ್ನೂ ವಸ್ತುಗಳಂತೆ ನೋಡಲಾಗುತ್ತದೆ. ಅವರ ಗಂಡನ ಕಣ್ಣಿನಲ್ಲಿ ಅವರಿಗೆ ಅದಕ್ಕಿಂತ ಹೆಚ್ಚಿನ ಯಾವುದೇ ಬೆಲೆಯಿಲ್ಲ. ಅವರನ್ನು ಆ ಬಗೆಯಲ್ಲಿ ವಸ್ತುಗಳಾಗಿ ಬದಲಾಯಿಸುವ ದೋಷವು ಆ ಸಮಾಜದ್ದೇ ಆಗಿದೆ.

**◆ ಕವಿತೆಯ ಮೊದಲ ಸಾಲು ನಿಮ್ಮಲ್ಲಿ ಹೇಗೆ ಹುಟ್ಟುತ್ತೆ... ನನ್ನದೇ ಅನುಭವ ಹೇಳೋದಾದ್ರೆ (ಈಗ ಹೊಳಿತಾ ಇರೋದು), ನನ್ನ ಬಹುತೇಕ ಕವಿತೆಗಳು ರಾತ್ರಿ, ತಡರಾತ್ರಿಯ ನಂತರವೇ ಬರೆಯಲು ಸಾಧ್ಯವಾಗಿದೆ. ಕಾವ್ಯರಚನಾ ಕಲೆಯ ಕುರಿತು ನಿಮ್ಮ ಅನುಭವ ಹಂಚಿಕೊಳ್ಳಿ.**

ಕೆಲವೊಮ್ಮೆ ನನ್ನ ಪದ್ಯಗಳ ಪ್ರಾರಂಭ ಮೊದಲ ಸಾಲಿನಿಂದಲೇ ಆಗಿಬಿಡುತ್ತದೆ. ಪ್ರಾಮಾಣಿಕವಾಗಿ ಹೇಳುವುದಾದರೆ, ನಾನು ಮೊದಲಿಗೆ ಬರೆಯುವುದು ನನ್ನ ಪದ್ಯಗಳ ಅತೀ ಪ್ರಮುಖ ಮತ್ತು ಅನುಭವದ ಪರಾಕಾಷ್ಠೆಯ ಸಾಲುಗಳನ್ನು. ಆ ನಂತರ ನಾನು ಅದರ ಆರಂಭದ ಮತ್ತು ಕೊನೆಯ ಸಾಲುಗಳನ್ನ ಕಟ್ಟುತ್ತೇನೆ. ಮತ್ತೆ ಇನ್ನು ಕೆಲವು ಸಂದರ್ಭಗಳಲ್ಲಿ ಅವು ಸಾಲುಗಳಾಗಿ ಹುಟ್ಟುವುದಿಲ್ಲ. ಬದಲಿಗೆ ನನ್ನ ಮನಸಿನಲ್ಲಿ ಕೇವಲ ಚಿತ್ರಗಳು ಮಾತ್ರ ಇರುತ್ತವೆ ಮತ್ತು ಅವುಗಳನ್ನು ಒಂದು ಸಾವಯವ ಏಕತೆ ಒಂದುಗೂಡಿಸುತ್ತದೆ.

**◆ ನಿಮ್ಮ ಕವನ ಸಾಮಾನ್ಯವಾಗಿ ಪರಕೀಯ (ಏಲಿಯನೇಷನ್) ಭಾವವನ್ನು ಹೊಂದಿರುತ್ತದೆ. ಇದು ಯಾಕೆ? ಇದರ ಅರ್ಥವೇನು?**

ರೂಮಿಯ ಮಸ್ನವಿಯ ಪ್ರಾರಂಭದಲ್ಲಿ ಬರುವ ರೀಡ್‌ಳ ಕಥೆಯಲ್ಲಿ, ರೀಡಳು ತನ್ನ ಬಳಗದಿಂದ ಬೇರೆಯಾಗಿದ್ದಾಳೆ. ಕಡು ದುಃಖ ಮತ್ತು ಒಬ್ಬಂಟಿತನ, ಮತ್ತು ಸಂಗಾತಿ ಇಲ್ಲದಿರುವುದನ್ನು ಪ್ರತಿನಿಧಿಸುವುದು ಮತ್ತೆ ಮತ್ತೆ ನನ್ನ ಪದ್ಯಗಳಲ್ಲಿ ಬರುತ್ತದೆ. ಇನ್ನೊಂದು ಬದಿಯಲ್ಲಿ ನಾನು ಏಕಾಂಗಿಯಾಗಿ ನಿಲ್ಲುವ ಮತ್ತು ಬೇರೆಯವರಿಗೆ ಮಾರ್ಗದರ್ಶಿಯಾಗುವ ಒಬ್ಬ ಸಶಕ್ತ ಮಹಿಳೆಯನ್ನು ಪ್ರತಿನಿಧಿಸುತ್ತೇನೆ. ಮತ್ತಾಕೆ ಈ ಕೆಳಗಿನ ಎಮ್ಮಾ ಲಝಾರಸ್ ಪದ್ಯದಲ್ಲಿ ವಿವರಿಸಲಾದಂತೆ ಬೆಳಕನ್ನು ನೀಡುವವಳಾಗಿದ್ದಾಳೆ:

ಒಬ್ಬ ಬಲಿಷ್ಠ ಮಹಿಳೆ ಬೆಳಕನ್ನು ಹಿಡಿದಿದ್ದಾಳೆ
ಅವಳ ಹೆಸರು ಬಂಧಿತ ಆಕಾಶದ ಮಿಂಚು,
ಮತ್ತವಳ ಹೆಸರು ಬಹಿಷ್ಕೃತ ತಾಯಿ

ಹಿಜಾಬ್‌ನ ಕುರಿತ ನನ್ನ 7ನೇ ಪ್ರಶ್ನೆಗೆ ಕವಯಿತ್ರಿ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ಸಾಹಿತ್ಯಿಕವಲ್ಲದ, ವೈಯಕ್ತಿಕ ಅನಿಸುವ ಪ್ರಶ್ನೆಗಳಿಗೂ ಉತ್ತರಿಸುವ ಗೊಡವೆಗೆ ಹೋಗಲಿಲ್ಲ. ಅವರು ಹೇಳಿದ್ದು: ''ನಾನು ಹಾಗೂ ನನ್ನ ವ್ಯಕ್ತಿತ್ವ ಒಂದು 'ಮಿಸ್ಟರಿ'ಯಾಗಿ ಉಳಿಯಬೇಕೆಂಬುದೇ ನನ್ನ ಆಕಾಂಕ್ಷೆ. ಆದರೆ ಇವತ್ತಿನ ಸೋಷಿಯಲ್ ಮೀಡಿಯಾಗಳ ಹಾವಳಿ ಎಷ್ಟಿದೆಯೆಂದರೆ, ಎಲ್ಲವನ್ನೂ ನುಡಿಯುತ್ತೇನೆ ಅಥವಾ ನಾನು ಸಾರುತ್ತಿರುವುದು ಸತ್ಯವನ್ನೇ ಎಂಬ ಭ್ರಮೆಯ ಮೂಲಕ ಎಲ್ಲವನ್ನೂ ಭ್ರಷ್ಟಗೊಳಿಸುವುದು...''

ಇರಾನಿನಲ್ಲಷ್ಟೇ ಅಲ್ಲ, ಕಳೆದ ವರ್ಷ ನಮ್ಮಲ್ಲೂ ನಡೆದ ಹಿಜಾಬ್ ಗಲಾಟೆಯನ್ನು ನಾವಿಲ್ಲಿ ನೆನಸಿಕೊಳ್ಳಬಹುದು! ●